# ಅನಂತ ಕೋಟಿ ಬ್ರಹ್ಮಾಂಡ ನಾಯಕ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 677.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 202.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 168.
4. **Note:** Lyrics given without highlights are as per Ref. 1. The wordings in Ref. 2 are same as in Ref. 1. But the lyrics are different in Ref. 1. They are given separately in green highlights.
5. **Note:** Singer has followed lyrics as in Ref. 1.
6. **Note:** Here, in this website, only one pravachana can be uploaded. Other parts of pravachanas of sri. Vid. Kallapur Pavamanachar can be viewed through the following links:
   Part 2 – https://www.youtube.com/watch?v=zt87LGckwOY&list=PLiXde4bHfHX_cVjLZrq86xyWOt77VfJJP&index=33
   Part 3 - https://www.youtube.com/watch?v=TN_nNvH7SwA
   Part 4 - https://www.youtube.com/watch?v=VwiVmYszv64
   Part 5 - https://www.youtube.com/watch?v=ojBqMS6Qx3E

## ಪುರಂದರ ದಾಸರ ಗದ್ಯ

(೧) ಅನಂತಕೋಟಿ ಬ್ರಹ್ಮಾಂಡ ನಾಯಕ

(೨) ರಮಾ ಬ್ರಹ್ಮ ರುದ್ರೇಂದ್ರಾದಿ ವಂದ್ಯ

(೩) ಭಕ್ತವತ್ಸಲ

(೪) ಭವರೋಗ ವೈದ್ಯ

(೫) ಶರಣಾಗತವಜ್ರಪಂಜರ

(೬) ಆಪದ್ಬಾಂಧವ

(೭) ಅನಾಥಬಂಧೋ

(೮) ಅನಿಮಿತ್ತಬಂಧೋ

(೯) ಪತಿತಪಾವನ

(೧೦) ಮಹಾರೋಗ ನಿವಾರಣ

(೧೧) ಮಹಾದೂರಿತ ನಿವಾರಣ

(೧೨) ಮಹಾಭಯ ನಿವಾರಣ

(೧೩) ಮಹಾಬಂಧ ವಿಮೋಚನ

(೧೪) ಭಯಕೃತ್ಭಯವಿನಾಶನ

(೧೫) ಕೃಪಾವಾರಿಧಿ

(೧೬) ದೇವದೇವೋತ್ತಮ

(೧೭) ದೇವಶಿಖಾಮಣಿ

(೧೮) ಕಪಟನಾಟಕಸೂತ್ರಧಾರ

(೧೯) ನಿತ್ಯರೊಳು ನಿತ್ಯ

(೨೦) ಸತ್ಯಸಂಕಲ್ಪ

(೨೧) ಮುಕ್ತಾಮುಕ್ತಿನಿಯಾಮಕ

(೨೨) ಮೋಕ್ಷಧರ

(೨೩) ಸುವೈಕುಂಠಪತಿ

(೨೪) ವೈಕುಂಠವಿಹಾರಿ

(೨೫) ತ್ರಿಧಾಮಾ

(೨೬) ತ್ರಿಗುಣವರ್ಜಿತ

(೨೭) ಜಗಜ್ಜನ್ಮಾದಿಕಾರಣ

(೨೮) ಜಗತ್ಕರ್ತ

(೨೯) ಜಗದತ್ಯಂತಭಿನ್ನ

(೩೦) ಜಗದೀಶ

(೩೧) ಜಗದುದ್ಧಾರ

(೩೨) ಜಗತ್ಸ್ವಾಮಿ

(೩೩) ಜಗದ್ವಿಲಕ್ಷಣ

(೩೪) ಜಗನ್ನಾಥ

(೩೫) ವಿಶ್ವಕುಟುಂಬಿ

(೩೬) ವಿರಾಟಮೂರ್ತಿ

(೩೭) ಹೇ ಮಂಗಳಾಂಗ

(೩೮) ಹೇ ಶುಭಾಂಗ

(೩೯) ಪರಮಮಂಗಳಮೂರ್ತಿ

(೪೦) ಕೋಮಲಾಂಗ

(೪೧) ನೀಲಮೇಘಶ್ಯಾಮ

(೪೨) ಇಂದುವದನ

(೪೩) ಬಹುಸುಂದರ

(೪೪) ಇಂದಿರಾವಂದಿತಚರಣ

(೪೫) ವೃಕೋದರ ವಂದ್ಯ

(೪೬) ಕೇಶವಾದಿರೂಪ

(೪೭) ಅಜಾದಿರೂಪ

(೪೮) ವಿಶ್ವಾದಿರೂಪ

(೪೯) ಆತ್ಮಾದಿರೂಪ

(೫೦) ಅನಿರುದ್ಧಾದಿರೂಪ

(೫೧) ಅನ್ನಮಯಾದಿರೂಪ

(೫೨) ಅನೇಕಮಂತ್ರಪ್ರತಿಪಾದ್ಯ

(೫೩) ಸರ್ವಸಾರಭೋಕ್ತ

(೫೪) ಅಷ್ಟೈಶ್ವರ್ಯಪ್ರದಾತ

(೫೫) ಓಂಕಾರಶಬ್ದವಾಚ್ಯ

(೫೬) ವಿಶಿಷ್ಟತಾರತಮ್ಯವಾಚ್ಯ

(೫೭) ಅನಂತಾನಂತಶಬ್ದವಾಚ್ಯ

(೫೮) ಅಣುಮಹದ್ರೂಪ

(೫೯) ಶಂಖಚಕ್ರಪೀತಾಂಬರಧಾರಿ

(೬೦) ಕಮಲಾಕ್ಷ

(೬೧) ಕಮಲನಾಭ

(೬೨) ವೈಜಯಂತಿವನಮಾಲಾಶೋಭಿತ

(೬೩) ಕೌಸ್ತುಭಭೂಷಿತ

(೬೪) ಸುವರ್ಣವರ್ಣ

(೬೫) ನವರತ್ನಕುಂಡಲಧಾರಿ

(೬೬) ಕಸ್ತೂರಿಶ್ರೀಗಂಧಲೇಪನ

(೬೭) ಗರುಡಾರೂಢಶೋಭಿತ

(೬೮) ಕಾಮಧೇನು

(೬೯) ಶ್ರೀವತ್ಸಲಾಂಛನ

(೭೦) ಕಲ್ಪವೃಕ್ಷ

(೭೧) ಚಿಂತಾಮಣಿ

(೭೨) ಕ್ಷೀರಾಬ್ಧಿಶಾಯಿ

(೭೩) ಶೇಷಶಾಯಿ

(೭೪) ವಟಪತ್ರಶಾಯಿ

(೭೫) ಖಗವಾಹನ

(೭೬) ದೇಶಕಾಲಗುಣಾತೀತ

(೭೭) ಅನಂತಬ್ರಹ್ಮ

(೭೮) ಅನಂತಶಕ್ತಿ

(೭೯) ಅನಂತಮೂರ್ತಿ

(೮೦) ಅನಂತಕೀರ್ತಿ

(೮೧) ಪುರಾಣಪುರುಷೋತ್ತಮ

(೮೨) ಅಕ್ರೂರವರದ

(೮೩) ಅಂಬರೀಷವರದ

(೮೪) ನಾರದವರದ

(೮೫) ಪ್ರಹ್ಲಾದವರದ

(೮೬) ಗಜೇಂದ್ರವರದ

(೮೭) ಮುಚುಕುಂದವರದ

(೮೮) ಧ್ರುವವರದ

(೮೯) ವಿಭೀಷಣವರದ

(೯೦) ಕುಲಾಲಭೀಮಸಂರಕ್ಷಕ

(೯೧) ಪುಂಡರೀಕವರದ

(೯೨) ಪರಾಶರವರದ

(೯೩) ಪಾರ್ಥಸಾರಥಿ

(೯೪) ಪಾಪವಿದೂರ

(೯೫) ಅರಿಜನಪ್ರಚಂಡ

(೯೬) ಚಾಣೂರಮಲ್ಲ ಮುಷ್ಟಿಕಾಸುರಮರ್ದನ

(೯೭) ಕಾಳಿಂದೀಕೂಲವನಕಂಠೀರವ

(೯೮) ಮದನಗೋಪಾಲ

(೯೯) ವೇಣುಗೋಪಾಲ

(೧೦೦) ವೇಣುನಾದಪ್ರಿಯ

(೧೦೧) ಷೋಡಶಸಹಸ್ರ ಗೋಪಿಕಾಪ್ರಿಯವಿಲಾಸ

(೧೦೨) ಅಹಲ್ಯಾಶಾಪವಿಮೋಚನ

(೧೦೩) ದ್ರೌಪದೀ ಅಭಿಮಾನರಕ್ಷಕ

(೧೦೪) ದುಷ್ಟಜನಮರ್ದನ

(೧೦೫) ಶಿಷ್ಟಜನಪರಿಪಾಲನ

(೧೦೬) ಮುಕುಂದ

(೧೦೭) ಮುರಾರೇ

(೧೦೮) ಕಂಸಾರೇ

(೧೦೯) ಅಸುರಾರೇ

(೧೧೦) ದೈತ್ಯಕುಲಸಂಹಾರ

(೧೧೧) ಕ್ಷಾತ್ರಕುಲಾಂತಕ

(೧೧೨) ಸೋಮಕಾಸುರಾಂತಕ

(೧೧೩) ಹಿರಣ್ಯಾಕ್ಷಹಿರಣ್ಯಕಶಿಪುಸಂಹಾರ

(೧೧೪) ರಾವಣಕುಂಭಕರ್ಣಮರ್ದನ

(೧೧೫) ಶಿಶುಪಾಲ ದಂತವಕ್ರಶಿರಚ್ಛೇದನ

(೧೧೬) ರಘುಕುಲೋದ್ಭವ

(೧೧೭) ದಶರಥಕೌಸಲ್ಯಾನಂದನ

(೧೧೮) ಸಿಂಧುರವರದ

(೧೧೯) ಸೀತಾಪತೇ ಶ್ರೀರಾಮಚಂದ್ರ

(೧೨೦) ಯದುಕುಲೋತ್ಪನ್ನ

(೧೨೧) ಯದುಕುಲೋದ್ಧಾರಿ

(೧೨೨) ಯದುಕುಲತಿಲಕ

(೧೨೩) ಯದುಕುಲಶ್ರೇಷ್ಠ

(೧೨೪) ವಸುದೇವದೇವಕೀನಂದನ

(೧೨೫) ಯಶೋದಾಕಂದ

(೧೨೬) ವೃಂದಾವನವಾಸಿ

(೧೨೭) ಗೋಪಕುಮಾರ

(೧೨೮) ಗೋಕುಲದ್ವಾರಕಾವಾಸ

(೧೨೯) ಗೋವರ್ಧನೋದ್ಧಾರಿ

(೧೩೦) ಕಾಳೀಯಮರ್ದನ

(೧೩೧) ಪೂತನಾಪ್ರಾಣಾಪಹಾರಿ

(೧೩೨) ಶಕಟಾಸುರ ಮರ್ದನ

(೧೩೩) ಪಾಂಡವಬಂಧೋ

(೧೩೪) ಪಾಂಡವಪರಿಪಾಲ

(೧೩೫) ಪಾಂಡವ ಪ್ರಿಯ

(೧೩೬) ಸುದಾಮಸಖ

(೧೩೭) ರುಕ್ಮಿಣೀವಲ್ಲಭ

(೧೩೮) ಸತ್ಯಭಾಮಾಪ್ರಿಯ

(೧೩೯) ಗೋಪೀಜನಜಾರ

(೧೪೦) ನವನೀತಚೋರ

(೧೪೧) ಗೋಪಾಲಕೃಷ್ಣ

(೧೪೨) ಗಂಗಾಜನಕ

(೧೪೩) ಪ್ರಯಾಗಮಾಧವ

(೧೪೪) ಕಾಶೀಬಿಂದುಮಾಧವ

(೧೪೫) ಪಂಪಾಪತಿ ಗುಲುಗುಂಜಮಾಧವ

(೧೪೬) ರಾಮೇಶ್ವರಸೇತುಮಾಧವ

(೧೪೭) ಬದರೀ ನಾರಾಯಣ

(೧೪೮) ಶ್ರೀರಂಗನಾಥ

(೧೪೯) ವಡ್ಡಿ ಜಗನ್ನಾಥ

(೧೫೦) ಉಡುಪಿ ಶ್ರೀಕೃಷ್ಣ

(೧೫೧) ಮೇಲುಕೋಟೆಯ ಚೆಲುವರಾಯ

(೧೫೨) ಬೇಲೂರ ಚೆನ್ನಿಗರಾಯ

(೧೫೩) ಅಹೋಬಲ ನರಸಿಂಹ

(೧೫೪) ಪಾಂಡುರಂಗವಿಟ್ಟಲ

(೧೫೫) ಶ್ರೀಶೈಲವಾಸ

(೧೫೬) ಅರುಣಾಚಲನಿಲಯ

(೧೫೭) ವೃಷಭಾಚಲವಿಹಾರಿ

(೧೫೮) ಅನಂತಶಯನ

(೧೫೯) ದರ್ಭಶಯನ

(೧೬೦) ಕಪಿಲ

(೧೬೧) ಹಯಗ್ರೀವ

(೧೬೨) ದತ್ತಾತ್ರೇಯ

(೧೬೩) ಶಿಂಶುಮಾರ

(೧೬೪) ಧನ್ವಂತರಿ

(೧೬೫) ಮಮ ಸ್ವಾಮಿ

(೧೬೬) ಸರ್ವಸ್ವಾಮಿ

(೧೬೭) ಜಗದಂತರ್ಯಾಮಿ

(೧೬೮) ಜಗದೀಶ

(೧೬೯) ಪ್ರಾಣೇಶ

(೧೭೦) ದ್ವಿಜ ಫಣಿಪ ಮೃಡೇಶ,

(೧೭೧) ಶ್ರೀರಮಣ

(೧೭೨) ಭೂರಮಣ

(೧೭೩) ದುರ್ಗಾರಮಣ

(೧೭೪) ಶ್ರೀಲಕ್ಷ್ಮೀ ವೆಂಕಟರಮಣ

(೧೭೫) ಭಾರತಿರಮಣ ಮುಖ್ಯಪ್ರಾಣಾಂತರ್ಗತ ಸೀತಾಪತೇ

(೧೭೬) ಶ್ರೀರಾಮಚಂದ್ರ

(೧೭೭) ಸಾಕ್ಷಾತ್ ಮನ್ಮಥಮನ್ಮಥ

(೧೭೮) ಹರಿವಿಟ್ಟಲ

(೧೭೯) ಪುಂಡರೀಕವರದ ಪಾಂಡುರಂಗವಿಟ್ಟಲ

(೧೮೦) ಪುರಂದರವಿಟ್ಟಲ ||

**Note:** The lyrics given below are as the book in Ref. 1. They are highlighted in green colour.

ಅನಂತ ಕೋಟಿ ಬ್ರಹ್ಮಾಂಡ ನಾಯಕ,

ರಮಾ ಬ್ರಹ ರುದ್ರೇಂದ್ರಾದಿ ವಂದ್ಯ,

ಭಕ್ತ ವತ್ಸಲ, ಭವ ರೋಗ ವೈದ್ಯ,

ಶರಣಾಗತ ವಜ್ರ ಪಂಜರ,

ಆಪತ್ಕಾಲ ಭಾಂದವ, ಅನಾಥ ಬಂಧೋ

ಅನಿಮಿತ್ತ ಬಂಧೋ, ದೀನ ಬಂಧೋ, ದಯಾಸಿಂಧೋ,

ಪತಿತ ಪಾವನ, ಮಹಾರೋಗ ನಿವಾರಣ,

ಮಹಾಭಯ ನಿವಾರಣ, ಮಹಾಬಂಧ ವಿಮೋಚನ,

ಮಹಾ ಪಾತಕ ನಾಶನ, ಅಷ್ಟ ದಾರಿದ್ರ್ಯ ಕಷ್ಟ ನಾಶನ,

ಅವ್ಯಾಹತ ಷಡ್ಗುಣೈಶ್ವರ್ಯ ಸಂಪನ್ನ,

ಅನಂತಾದಿ ಗುಣ ಪರಿಪೂರ್ಣ, ಅಶೇಷ ದೋಷಾಪಹರ್ತಾ,

ಅಘಟಿತ ಘಟನಾ ಸಮರ್ಥ, ಆದಿ ಮಧ್ಯಂತರಹಿತ,

ಅಕ್ಷರಾದ್ವಿತೀಯ, ಅನಘ, ಆದಿ ನಾರಾಯಣ,

ಅನಂತ ವೇದ ಪ್ರತಿಪಾದ್ಯ, ನಿತ್ಯರೂಳು ನಿತ್ಯ,

ಅನಂತಕೋಟಿ ಮನ್ಮಥಲಾವಣ್ಯ,

ಅಪ್ರಾಕೃತ ರಸಭೋಕ್ತ, ಅಷ್ಟೈಶ್ವರ್ಯ ಪ್ರದಾತ,
ಓಂಕಾರ ಶಬ್ದವಾಚ್ಯ, ಅಣು ಮಹದ್ರೂಪ,
ಶಂಖ ಚಕ್ರ ಪೀತಾಂಬರ ಧರ, ಚಕ್ರಪಾಣಿ,
ವೈಜಯಂತಿ ವನಮಾಲಾ ಶೋಭಿತ,
ಕೌಸ್ತುಭಾ ಭೂಷ, ನವರತ್ನ ಕುಂಡಲಧಾರಿ,
ಕಸ್ತೂರಿ ಶ್ರೀಗಂಧ ಲೇಪನ,
ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ,
ಶೇಷ ಶಾಯಿ, ಕ್ಷೀರಾಬ್ದಿ ಶಾಯಿ, ವಟಪತ್ರ ಶಾಯಿ,
ಖಗ ವಾಹನ, ದೇಶ ಕಾಲ ಗುಣಾತೀತ,
ಅನಂತ ಬಾಹು, ಅನಂತ ಕೀರ್ತಿ,
ಸರ್ವಾನಂತ, ಪರಮ ಪುರುಷೋತ್ತಮ,
ಅಕ್ರೂರ ವರದ, ಅಂಬರೀಶ ವರದ, ಪ್ರಹ್ಲಾದ ವರದ,
ಧ್ರುವ ವರದ, ವಿಭೀಷಣ ವರದ, ಮುಚುಕುಂದ ವರದ,
ಗಜೇಂದ್ರ ವರದ, ಪರಾಶರ ವರದ, ಪುಂಡರೀಕ ವರದ,
ದ್ರೌಪದಿ ಅಭಿಮಾನ ರಕ್ಷಕ, ಅಹಲ್ಯಾ ಶಾಪ ವಿಮೋಚಕ,
ದುಷ್ಟ ಜನ ಮರ್ಧನ, ವಿಶಿಷ್ಟ ಜನ ಪರಿಪಾಲ,
ಮುಕುಂದ, ಮುರಾರಿ, ಕಂಸಾರಿ, ಅಸುರಾರಿ,
ದೈತ್ಯ ಕುಲ ಸಂಹಾರಿ, ಕ್ಷಾತ್ರ ಕುಲಾಂತಕ,
ಸೋಮಕ ಅಸುರಾಂತಕ, ಹಿರಣ್ಯಾಕ್ಷ-ಹಿರಣ್ಯ ಕಶಿಪು ಸಂಹಾರಿ,
ರಾವಣ ಕುಂಭಕರ್ಣ ವಿಮರ್ಧನ,
ಶಿಶುಪಾಲ ದಂತವಕ್ರ ಶಿರಚ್ಛೇಧನ,
ರಘುಕುಲೋದ್ಭವ, ರಘುಕುಲ ತಿಲಕ,
ರಘುಲೋತ್ಪನ್ನ, ಸಿಂಧು ಬಂಧನ,
ಸೀತಾಪತೇ, ಶ್ರೀ ರಾಮಚಂದ್ರ,
ಯದುಕುಲೋದ್ಭವ, ಯದುಕುಲ ತಿಲಕ,
ಯದುಕುಲೋದ್ಧಾರಿ, ಯದುಕುಲೋತ್ಪನ್ನ,
ವಸುದೇವ ದೇವಕಿ ನಂದನ,
ಯಶೋದಾ - ನಂದಗೋಪ ಕುಮಾರ,
ವೃಂದಾವನ - ಗೋಕುಲ - ದ್ವಾರಕಾ ವಾಸ,
ಗೋವರ್ಧನೋದ್ಧಾರ, ಕಾಲೀಯ ಮರ್ಧನ,
ಪುತನಾ ಪ್ರಾಣಾಪಹಾರಿ, ಶಕಟಾಸುರ ಮರ್ದನ,
ಪಾಂಡವ ಬಂಧೋ, ಪಾಂಡವ ಪ್ರತಿಪಾಲ,

ಪಾರ್ಥಸಾರಥಿ, ಪಾಪ ವಿದೂರ,
ಗಜಹನನ ಪ್ರಚಂಡ, ಚಾಣೋರ ಮಲ್ಲ ನಾಶ
ಸುಧಾಮ ಸಖ, ರುಕ್ಮಿಣಿ ವಲ್ಲಭ,
ಸತ್ಯಭಾಮಾ ಪ್ರಿಯ, ಗೋಪಿಜನಜಾರ,
ನವನೀತ ಚೋರ, ಗೋಪಾಲ ಕೃಷ್ಣ,
ಗಂಗಾ ಜನಕ, ಪ್ರಯಾಗ ಮಾಧವ,
ಕಾಶೀ ಬಿಂಧು ಮಾಧವ, ಪಂಪಾಪತಿ ಗುಲುಗುಂಜಿ ಮಾಧವ,
ರಾಮೇಶ್ವರ ಸೇತು ಮಾಧವ, ಬದರಿ ನಾರಾಯಣ,
ಶ್ರೀರಂಗನಾಥ, ಒಡ್ಡಿ ಜಗನ್ನಾಥ,
ಉಡುಪಿಯ ಕೃಷ್ಣ, ಚೆಲ್ಲೆಪಿಲ್ಲೆರಾಯ,
ಬೇಲೂರ ಚೆನ್ನಿಗರಾಯ, ಪಾಂಡುರಂಗ ವಿಠ್ಠಲ,
ಶ್ರೀಶೈಲ – ಅರುಣಾಚಲ - ವೃಷಾಚಲ ನಿವಾಸ,
ಅನಂತ ಶಯನ, ದರ್ಭ ಶಯನ, ಕಪಿಲ, ಹಯಗ್ರಿವ,
ದತ್ತಾತ್ರೇಯ, ಹಂಸನಾಮಕ, ಧನ್ವಂತರಿ,
ವೃಷಭ, ಮಹೀದಾಸ, ಯಜ್ಞ ನಾಮಕ,
ಮಮ ಸ್ವಾಮಿ, ಸರ್ವಾಂತರ್ಯಾಮಿ, ಶ್ರೀಶ,
ವಾಣೀಶ, ದ್ವಿಜ ಫಣಿಪ-ಮೃಡೇಶ, ಶ್ರೀ ರಮಣ,
ಭೂ ರಮಣ, ಲಕ್ಷ್ಮೀ ರಮಣ, ಆಲಮೇಲುಮಂಗರಮಣ,
ಇಂದಿರಾ ರಮಣ, ಲಕ್ಷ್ಮೀ ರಮಣ, ಶ್ರೀ ವೆಂಕಟರಮಣ,
ಜಗದ್ರಕ್ಷಕ, ಜಗತ್ಪಾವನ, ಜಗದ್ಗುರುವೆ,
ಪುರಂದರ ವಿಠ್ಠಲ, ಸಾಕ್ಷಾತ್ಮನ್ಮಥ ಮನ್ಮಥ !

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು ಗದ್ಯವೆಂದು ಹೆಸರಾಗಿದೆ. ಇದರಲ್ಲಿ ಒಂದುನೂರ ಎಂಬತ್ತು ಹೆಸರುಗಳಿದ್ದು ಒಂದೊಂದು ಹೆಸರೂ ಹರಿಯ ಮಹಿಮೆಯನ್ನು ಹೇಳುತ್ತವೆ. ಹರಿಯ ಕಲ್ಯಾಣ ಗುಣಗಳು, ಅವತಾರ ವಿಶೇಷಗಳು, ಕ್ಷೇತ್ರ ಸನ್ನಿಧಾನಗಳು, ಭಕ್ತರನ್ನು ಕಾಪಿಟ್ಟ ಸಂಧರ್ಬಗಳು ಬಂದಿವೆ. ಇದು ನಾಮಾವಳಿ ಎಂಬ ವರ್ಗಕ್ಕೆ ಸೇರಿದ ರಚನೆ.

**ಅನಂತ ಕೋಟಿ** = ಅಸಂಖ್ಯ

**ಅಶೇಷ** = ಸಂಪೂರ್ಣ

**ಅಘಟಿತ** = ರಚನೆಗೆ ಅಶಕ್ಯವಾದ

**ಅಕ್ಷರ** = ನಾಶ ರಹಿತ

**ಸಿಂಧು** = ಸಮುದ್ರ

**ಗಜ** = ಕುವಲಯಾಪೀಡವೆಂಬ ಕಂಸನ ಆನೆ

**ಗುಲಗಂಜಿ ಮಾಧವ** = ಹಂಪೆಯ ವಿರೂಪಾಕ್ಷ ದೇವಾಲಯದೊಳಗೆ ಎಡಗಡೆಯ ಭೂ ಮಂದಿರದಲ್ಲಿ ಇರುವ ಗುಲಗಂಜಿ ಮಾಧವ

**ಶ್ರೀಶೈಲ** = ಜ್ಯೋತಿರ್ಲಿಂಗ ಕ್ಷೇತ್ರ.

**ಅರುಣಾಚಲ** = ಇದು ಶೈವ ಕ್ಷೇತ್ರವಾದರೂ ಇಲ್ಲಿ ಶಿವನು ಶ್ರೀ ಹರಿಯ ಧ್ಯಾನ ಮಾಡುತ್ತಾ ಅದನ್ನು ಜನರಿಗೆ ಉಪದೇಶಿಸುತ್ತಾನೆಂಬ ನಂಬಿಕೆ ವೈಷ್ಣವರಲ್ಲಿದೆ.

**ವೃಷಾಚಲ** = ತಿರುಪತಿ

**ಅನಂತಶಯನ** = ತಿರುವನಂತಪುರಂ ನಲ್ಲಿರುವು ದೇವರು

**ದರ್ಭ ಶಯನ** = ಮಾನ ಮದುರೆಯಿಂದ ರಾಮೇಶ್ವರಕ್ಕೆ ಹೋಗುವ ದಾರಿಯಲ್ಲಿ ರಾಮನಾಡು ಎಂಬ ರೈಲ್ವೆ ನಿಲ್ದಾಣವಿದೆ. ಇಲ್ಲಿಂದ ದರ್ಭಶಯನ ಮಂದಿರವು ೬ ಮೈಲಿ ದೂರದಲ್ಲಿದೆ. ಇಲ್ಲಿಯ ಮಂದಿರದಲ್ಲಿ ದರ್ಬ ಶ್ಯಯಯ ಮೇಲೆ ಮಲಗಿದ ಶ್ರೀ ವಿಷ್ಣುವಿನ ದ್ವಿಭುಜ ಮೂರ್ತಿ ಇದೆ.

ವಿಭೀಷಣನ ಸಮ್ಮತಿಯಿಂದ ಶ್ರೀ ರಾಮನು ಇಲ್ಲಿ ದರ್ಭದ ಆಸನವನ್ನು ಹಾಕಿಕೊಂಡು ಮೂರು ದಿನಗಳ ವರೆಗೆ ವ್ರತ ಮಾಡಿ ಮಾರ್ಗವನ್ನು ಕೊಡು ಎಂದು ಸಮುದ್ರ ರಾಜನನ್ನು ಪ್ರಾರ್ಥಿಸಿದನು - ಎಂಬ ಕಥೆ ಈ ಕ್ಷೇತ್ರದ ವಿಷಯಕವಾಗಿದೆ. ಇಲ್ಲಿಂದ ಮೂರು ಮೈಲುಗಳ ಮೇಲೆ ಸಮುದ್ರ ದಂಡೆಯ ಮೇಲೆ ಹನುಮಂತನ ಗುಡಿ ಇದೆ.

**ಹಯಗ್ರೀವ** = ಹಯವದನ, ಪರಮಾತ್ಮನ ಒಂದು ಅವತಾರ. ಮಹಾವಿಷ್ಣು ಕ್ರೀಡಿಸುತ್ತಿರುವಾಗ ಲಕ್ಷ್ಮಿಯನ್ನು ನೋಡಿ ನಕ್ಕ. ನಿನ್ನ ತಲೆ ಉರುಳಿ ಹೋಗಲಿ ಎಂದು ಲಕ್ಷ್ಮಿ ಶಾಪಕೊಟ್ಟಳು. ಬಳಿಕ ಅವನು ಕ್ಷೀರ ಸಮುದ್ರದಲ್ಲಿ ಆದಿಶೇಷನ ಮೇಲೆ ಮಲಗಿ ತನ್ನ ಶರ್ಙ್ಯ ಧನುವನ್ನು ತಲೆದಿಂಬು ಮಾಡಿ ಕೊಂಡು ನಿದ್ದೆ ಮಾಡುತ್ತಿದ್ದನು. ಆಗ ಮಧುಕೈಟಭರೆಂಬ ರಾಕ್ಷಸರು ಲೋಕ ಕಂಟಕ ರಾಗಲು ದೇವತೆಗಳು ವಿಷ್ಣುವಿನಲ್ಲಿಗೆ ಬಂದು ನಿದ್ರಿಸುತ್ತಿರುವುದನ್ನು ಕಂಡರು. ದೇವತೆಗಳು ಆಗ ಗೆದ್ದಲಿಯನ್ನು ಹುಟ್ಟಿಸಿ ಅದಕ್ಕೆ ಯಜ್ಞದಲ್ಲಿ ಹವಿರ್ಭಾಗ ಕೊಡುವಂತೆ ಅಭಯಕೊಟ್ಟು ವಿಷ್ಣುವಿನ ಧನುಸ್ಸಿನ ಹೆದೆಯನ್ನು ತಿನ್ನಲಾಗಿ ಬಿಲ್ಲಿನ ತುದಿ ಹಾರಿ ವಿಷ್ಣುವಿನ ಕೊರಳು ಹೋಯಿತು. ದೇವತೆಗಳು ಕುದುರೆಯ ಮುಂದಕ್ಕೆ ಸೇರಿಸಿದರು. ಇದೆ ಹಯಗ್ರೀವ ರೂಪ. (ಭಾರತ, ಉದ್ಯೋಗ ೧೨೦)

**ದತ್ತಾತ್ರೇಯ** = ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ಅತ್ರಿ ಮಹರ್ಷಿ ಸಂತಾನ ಕ್ಕಾಗಿ ತಪಸ್ಸು ಮಾಡಿದನು. ಆಗ ಪ್ರಸನ್ನರಾದ ತ್ರಿಮೂರ್ತಿಗಳು ತಮ್ಮ ಒಬ್ಬೊಬ್ಬರ ಅಂಶದಿಂದ ಒಬ್ಬೊಬ್ಬ ಮಗನು ಹುಟ್ಟುವನೆಂದು ಅನುಗ್ರಹಿಸಿದರು. ಅದರಂತೆ ಬ್ರಹ್ಮನ ಅಂಶದಿಂದ ಚಂದ್ರನು, ವಿಷ್ಣುವಿನ ಅಂಶದಿಂದ ದತ್ತಾತ್ರೇಯನು, ಶಿವನ ಅಂಶದಿಂದ ದುರ್ವಾಸ ಮುನಿಯು ಜನಿಸಿದರು.

**ಹಂಸನಾಮಕ** = ವಿಷ್ಣುವಿನ ಅವತಾರ. ಇವನು ಸನಕಾದಿಗಳ ಸಂಶಗಳನ್ನು ದೂರ ಮಾಡಿದನು.
ಧನ್ವಂತರಿ = ದೇವತೆಗಳ ವೈದ್ಯ. ಆಯುರ್ವೇದವನ್ನು ಲೋಕದಲ್ಲಿ ಪ್ರಚಾರಕ್ಕೆ ತಂದವನು. ದೇವ-ದಾನವರ ಸಮುದ್ರ ಮಥನ ಮಾಡಿದಾಗ ಹೊರಟ ಹದಿನಾಲ್ಕು ರತ್ನಗಳಲ್ಲಿ ಇವನೂ ಒಬ್ಬ.

**ಋಷಭ ದೇವ** = ನಾಭಿರಾಜ ಮತ್ತು ಮೇರು ದೇವಿಯರಿಗೆ ಋಷಭ ದೇವನೆಂಬ ಮಗನಾದನು. ಈ ಋಷಭ ದೇವಾನು ವಿಷ್ಣುವಿನ ಅವತಾರವೆಂದು ಭಾಗವತ ಹೇಳುತ್ತದೆ.

**ಮಹೀದಾಸ** = ಇವನೂ ಐತರೇಯ ಉಪನಿಷತ್ತಿನ ದ್ರಷ್ಟಾರನು. ಇವನ ಹೆಸರೂ ಐತರೇಯ ಬ್ರಾಹ್ಮಣದಲ್ಲಿ ಉಲ್ಲೇಖಿತವಾಗಿದೆ. ಇವನೂ ವಿಷ್ಣುವಿನ ಅವತಾರವೆಂದು ಜನರು ನಂಬಿದ್ದಾರೆ.

**ಯಜ್ಞ ನಾಮಕ** = ವಿಷ್ಣು (ವಿಷ್ಣು ಸಹಸ್ರನಾಮ)

**ಆಲಮೇಲುಮಂಗಮ್ಮ** = ಪದ್ಮಾವತಿಗೆ ತಮಿಳಿನಲ್ಲಿ ಆಲಮೇಲುಮಂಗಮ್ಮ ಎಂಬ ಹೆಸರಿದೆ.

**ವಿಶೇಷ ಸೂಚನೆ: -**

'ಪುರಂದರದಾಸರ ಕೀರ್ತನೆಗಳು' ಸಂಪುಟ ೪ರಲ್ಲಿ 'ಗದ್ಯ'ವೆಂಬ ಹೆಸರಿನಿಂದ ಈ ಕೆಳಗಿನ ಪಠ್ಯವನ್ನು ನೀಡಲಾಗಿದೆ. ಇದರಲ್ಲಿ ಶ್ರೀಹರಿಯ ೭೫ ಹೆಸರುಗಳನ್ನು ಹೇಳಲಾಗಿದೆ. ಮೊದಲು ಬೇರೆ ಸಾಹಿತ್ಯಭಾಗವಾಗಲಿ ವಿವರಣೆಯ ಭಾಗವಾಗಲಿ ಇರುವುದಿಲ್ಲ. ಈ ಗದ್ಯವನ್ನು ಹಾಡುವ ಅಥವಾ ಭಜನೆಯ ಸಂದರ್ಭದಲ್ಲಿ ಹೇಳುವ ಸಂಪ್ರದಾಯವಿರುವ ಬಗ್ಗೆ ತಿಳಿಯದು. ಪಾವಂಜೆ ಗುರುರಾಯರಿಗೆ ಉಪಲಬ್ಧವಾದ ಪುರಂದರದಾಸರ ಕೃತಿಗಳ ಯಾವುದೋ ಹಸ್ತಪ್ರತಿಯಲ್ಲಿ 'ಗದ್ಯ'ವೆಂಬ ಹೆಸರಿನಲ್ಲಿ ಈ ನಾಮಾವಳಿ ಇದ್ದುದನ್ನು ಅವರು ಮುದ್ರಿಸಿರಬೇಕೆಂದು ಊಹಿಸ ಬಹುದಾಗಿದೆ. ಕೊನೆಗೆ 'ಪುರಂದರವಿಠಲ' ಎಂದಿರುವುದರಿಂದ ಇದು ಪುರಂದರದಾಸರ ರಚನೆ ಎಂದು ಊಹಿಸಬಹುದಾದ್ದನ್ನು ಹೊರತು ನಿಜವಾಗಿಯೂ ದಾಸರ ರಚನೆಯೇ ಎಂಬುದಕ್ಕೆ ಬೇರೆ ಯಾವ ಮಾಹಿತಿಯೂ ಇರುವುದಿಲ್ಲ. ಇದು ಉಗಾಭೋಗದ ವರ್ಗಕ್ಕೆ ಸೇರುವಂತಹುದೂ ಅಲ್ಲ. ಕೀರ್ತನೆಗಳ ವರ್ಗದಲ್ಲಂತೂ ಹೇಗೂ ಸೇರುವುದಿಲ್ಲ. ಆದುದರಿಂದ ಅನುಬಂಧದಲ್ಲಿ ಈ ಭಾಗವನ್ನು ನೀಡಲಾಗಿದೆ.

ಡಾ| ಪಾದೇಕಲ್ಲು ವಿಷ್ಣು ಭಟ್ಟ.

**Classification:** Keerthane
**Ankita:** purandara vittala
**Location:** NA
**Category:** Vishnu Stuti, Hari Sarvottama
**Sub-Category:** Vishnu, Ananta, brahmanda, gadya
**Pravachana:** Vid. Kallapur Pavamanachar
**Explanation:** NA